## ಬೆಂಗಳೂರಿನ 'ಅರ್ಮರಿ'



ಅರ್ಮರಿ ಎಂದೊಡನೆ ನೆನಪಾಗುವುದು ಶ್ರೀರಂಗಪಟ್ಟಣದಲ್ಲಿ ರೈಲು ಮಾರ್ಗ ವಿಸ್ತರಣೆ ಮಾಡುವಾಗ ಸ್ಥಳಾಂತರಗೊಂಡ ಟಿಪ್ಪು ಕಾಲದ ಅರ್ಮರಿ. ಆದರೆ ಬೆಂಗಳೂರಿನಲ್ಲಿ ಅಂತಹದ್ದೇ ಅರ್ಮರಿ ಇದ್ದರೂ ಪ್ರವಾಸಿಗರ ಗಮನಕ್ಕೆ ಬಾರದೇ ಹಾಗೂ ಸಂರಕ್ಷಣೆ ಸೌಭಾಗ್ಯ ಸಿಗದೇ ಹಾಳಾಗುತ್ತಿರುವುದು ದುರದೃಷ್ಟಕರ. ಇಲ್ಲಿನ ಟಿಪ್ಪುವಿನ ಅರಮನೆ ಹತ್ತಿರದಲ್ಲಿ ಇರುವ ಈ ಸ್ಮಾರಕ ಒಂದು ಕಾಲದಲ್ಲಿ ಕೋಟೆಯ ಭಾಗವಾಗಿತ್ತು. ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ಯುದ್ಧದ ಸಿದ್ಧತೆಗೆ ಬೇಕಾಗುವ ಮದ್ದು ಗುಂಡುಗಳು ಹಾಗೂ ವಿವಿಧ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಅರ್ಮರಿಗಳನ್ನು ನಿರ್ಮಿಸುತ್ತಿದ್ದರು. ಅಂತಹದ್ದೇ ಒಂದು ರಚನೆ ಇದು.

ಬೆಂಗಳೂರು ಮೆಡಿಕಲ್ ಕಾಲೇಜಿನ ಹಿಂಭಾಗದಲ್ಲಿ ಹಾಗೂ ಕಲಾಸಿಪಾಳ್ಯದ ಮೂಲಕ ಎ.ವಿ. ರಸ್ತೆಯಲ್ಲಿ ಒಳಗೆ ಹೋದರೆ ಈ ಸ್ಮಾರಕ ತಲುಪಬಹುದು. ಈ ಸ್ಮಾರಕದ ಬಗ್ಗೆ ಫಲಕ ಹಾಕಿದಲ್ಲಿ ಅರಮನೆಗೆ ಭೇಟಿ ನೀಡುವವರು ಇಲ್ಲಿಗೂ ಬರಲು ಅನುಕೂಲವಾಗುತ್ತದೆ.

—ಶ್ರೀನಿವಾಸ ಮೂರ್ತಿ ಎನ್. ಎಸ್. ಬೆಂಗಳೂರು

## ಮರದಲ್ಲಿ ಮೂಡಿದ ಗಣೇಶ!

ಪ್ರಕೃತಿಯಲ್ಲಿ ವೈವಿಧ್ಯಮಯವಾದ ವಿಶೇಷತೆಗಳಿವೆ. ಎಲ್ಲರಿಗೂ ಅವುಗಳನ್ನು ಕಣ್ಣಾರೆ ನೋಡಿ ಅನುಭವಿಸಲಾಗದು. ನಮಗೆ ಅದೃಷ್ಟವಿದ್ದು, ದೃಷ್ಟಿ ಸೂಕ್ಷ್ಮತೆ ಇದ್ದರೆ ಮಾತ್ರವೇ, ನಿಸರ್ಗದಲ್ಲಿ ಅವಿತುಕೊಂಡಿರುವ ವಿಸ್ಮಯ ವಸ್ತುಗಳನ್ನು ಕಣ್ತುಂಬಿಕೊಳ್ಳಲು ಸಾಧ್ಯ. ಈ ಮಾತಿಗೆ ಚಿತ್ರದಲ್ಲಿ ಕಾಣುತ್ತಿರುವ ಗಣೇಶನ ಆಕೃತಿಯೇ ಉತ್ತಮ ನಿದರ್ಶನ. ಗಜಗಾತ್ರವಾಗಿ ಬೆಳೆಯುತ್ತಿರುವ ಮರದ ಬುಡದಲ್ಲಿ ಸಹಜವಾಗಿ ಮೂಡಿದ ಗಣೇಶನ ಆಕೃತಿಯ ಚಿತ್ರವಿದು. ಥೇಟ್ ಗಣೇಶನ ಮೂರ್ತಿಯಂತೆ ತೋರುವ ಈ ವಿಸ್ಮಯವು ನಿಸರ್ಗದ ಕೊಡುಗೆ. ಅಂದ ಹಾಗೆ ಈ ಸಹಜವಾಗಿ ಸೃಷ್ಟಿಯಾಗಿರುವ ಈ ಗಣೇಶನ ಮೂರ್ತಿಯು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಮಾವಿನಕಟ್ಟಾದ ಸಮೀಪ (ಚಿಪಗೇರಿಗೆ ಹೋಗುವ ಮಾರ್ಗದಲ್ಲಿ....) ಟಾರ್ ರಸ್ತೆಯ ಪಕ್ಕದಲ್ಲಿದೆ. ನೋಡುಗರಿಗೂ ಹುಬ್ಬೇರಿಸುವಂತಿರುವ ಈ ಗಣೇಶ ವಿಗ್ರಹಕ್ಕೆ ಸ್ಥಳೀಯರೊಬ್ಬರು ಪೂಜೆ ಮಾಡುತ್ತಿರುವುದು ವಿಶೇಷ.

—ಗಣಪತಿ ಹಾಸ್ಪುರ, ಯಲ್ಲಾಪುರ





## ಅಪರೂಪದ ಕಳಸೆ

ಅಪರೂಪದ ಕಲಾತ್ಮಕ ವಸ್ತು ನೋಡಲು ವಿಭಿನ್ನವಾಗಿದ್ದರೂ ಈಗೀಗ ಕಣ್ಣಿಗೆ ಕಾಣುವುದೇ ಕಷ್ಟ. ಆದರೆ ಹಳ್ಳಿ ಪ್ರದೇಶಗಳಲ್ಲಿ ಮರದಿಂದ ಮಾಡಿದ ಕಳಸೆಯಿಂದ 14 ಕೆ.ಜಿ ಅಕ್ಕಿಯನ್ನು ಅಳತೆ ಮಾಡುತ್ತಾರೆ. ನರಿಕೊಂಬು ಗ್ರಾಮದ ಗುತ್ತಿಗೆ ಮನೆಯಾದ ಲಕ್ಷಣ್ ಕುಲಾಲ್ ಅವರ ಮನೆಯಲ್ಲಿ ಇಂದಿಗೂ ಇದು ಬಳಕೆಯಲ್ಲಿದೆ.

—ಚೈತ್ರಾ ಕುಲಾಲ್, ಪುತ್ತೂರು

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.

ಇಮೇಲ್ ವಿಳಾಸ

editorsu@sudha.co.in